2. ವಿವಿಧ ಆಡಳಿತದಲ್ಲಿ ಅದರಲೂ ಕುಲಸಚಿವರನ್ನು ನೇಮಕ ಮಾಡುವಾಗ Search Committee ಮೂಲಕ ಆಯ್ಕೆ ಮಾಡಬೇಕು.

3. ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿಯವರು ಸಿಂಡಿಕೇಟ್ ಸದಸ್ಯರಾಗಿರಬೇಕು.

4. ಪ್ರತ್ಯೇಕ ವಿಭಾಗಗಳಿಗೆ ಉಪಕುಲಸಚಿವರನ್ನು ನೇಮಿಸಿ ಕುಲಸಚಿವರ (ಮೌಲ್ಯಮಾಪನ) ಉಸ್ತುವಾರಿ ನಡೆಸಬೇಕು.

5. ಅರ್ಹ ಅಭ್ಯರ್ಥಿಗಳನ್ನು ಪ್ರಮುಖ ಹುದ್ದೆಗಳಿಗೆ ನೇಮಿಸಬೇಕು.

6. ಪ್ರಾದೇಶಿಕ ಕಚೇರಿಗಳನ್ನು ನೆನಪಿಸಬೇಕು.

7. ಇಂತಹ ಅಹಿತಕರ ಪ್ರಕರಣ ಮರುಕಳಿಸದಂತಾಗಲು ಸಮಗ್ರ ತನಿಖೆಗಾಗಿ ಈ ಪ್ರಕರಣಗಳನ್ನು ಸಿ.ಓ.ಡಿ.ಗೆ ವಹಿಸುವುದು

8. ಸರ್ಕಾರದ ಪರವಾಗಿ ಪ್ರಾತಿನಿಧ್ಯ ಸಿಗುವಂತಾಗಲು ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ತಲಾ ಇಬ್ಬರು ಸದಸ್ಯರುಗಳನ್ನು ಸಿಂಡಿಕೇಟ್‌ಗೆ ನಾಮಕರಣ ಮಾಡಬೇಕು.

ಇ) ಪರೀಶಿಲನೆಯಲ್ಲಿದೆ.

3814(4058) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) ಮಾನ್ಯ ಶ್ರೀ ಡಿ. ಮಂಜನಾಥ (ಉನ್ನತ ಶಿಕ್ಷಣ ಸಚಿವರು) ಈಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಖಾಸಗಿ ಬಿ.ಡ್. ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಈ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಈ ಕಾಲೇಜುಗಳಲ್ಲಿ ವ್ಯಾಪಕ ಕಾಪಿಯಿಂಗ್ (ನಕಲಿ ಮಾಡುತ್ತಿರುವುದು) ಪತ್ತೆಯಾಗಿದೆಯೇ;

ಈ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜನಾಥ (ಉನ್ನತ ಶಿಕ್ಷಣ ಸಚಿವರು)

ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 92 ಖಾಸಗಿ ಬಿ.ಎಡ್. ಕಾಲೇಜುಗಳು ಇರುತ್ತವೆ. ಸರ್ಕಾರಿ ಬಿ.ಎಡ್. ಕಾಲೇಜುಗಳು ಇರುವುದಿಲ್ಲ.

ಆ) 8586 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಇ) ಮೇಲ್ಕಂಡ ಕಾಲೇಜುಗಳ ಪೈಕಿ 2 ಕಾಲೇಜುಗಳಲ್ಲಿ ವ್ಯಾಪಕವಾಗಿ ಕಾಪಿ ಆಗಿರುವ ವರದಿಯಾಗಿದೆ, ಒಂದು ಕಾಲೇಜಿನಲ್ಲಿ 96 ವಿದ್ಯಾರ್ಥಿಗಳ ವಿರುದ್ಧ ಮತ್ತು ಇನ್ನೊಂದು ಕಾಲೇಜಿನಲ್ಲಿ 63 ವಿದ್ಯಾರ್ಥಿಗಳು ಕಾಪಿ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಉಳಿದ ಕಾಲೇಜುಗಳಲ್ಲಿ ಯಾವುದೇ ಕಾಪಿ ಪ್ರಕರಣಗಳು ವರದಿಯಾಗಿಲ್ಲ.

ಈ) ಇದನ್ನು ತಡೆಗಟ್ಟಲು ಏಳು ಸಂಚಾರಿ ತನಿಕಾದಳಗಳನ್ನು ರಚಿಸಲಾಗಿತ್ತು. ಪ್ರತಿಯೊಂದು ದಳದಲ್ಲಿ ಐದು ಜನ ಸದಸ್ಯರನ್ನು ನೇಮಿಸಲಾಗಿತ್ತು. 2 ಕಾಲೇಜಿನಲ್ಲಿ ಖಾಯಂ ವೀಕ್ಷಕರನ್ನು ಪರೀಕ್ಷೆ ನಡೆಯುವ ಅವಧಿಯಲ್ಲಿ ನೇಮಿಸಲಾಗಿತ್ತು. ಒಂದು ಕಾಲೇಜಿನ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಿ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗಿದೆ.

ಎಲ್ಲಾ ಪ್ರಕರಣಗಳನ್ನು ಅಕಾರ್ಯ (ಮಾಲ್ ಪ್ರಾಕ್ಟೀಸಸ್) ವಿಚಾರಣಾ ಸಮಿತಿಗೆ ಕಳುಹಿಸಲಾಗಿದೆ. ಸಮಿತಿಯ ಶಿಫಾರಸ್ಸನ್ನು ನೀರೀಕ್ಷಿಸಲಾಗುತ್ತಿದೆ. ಈ 159 ವಿದ್ಯಾರ್ಥಿಗಳನ್ನು ಉಳಿದ ಪರೀಕ್ಷೆಗಳಿಂದ ಅಮಾನತ್ತುಗೊಳಿಸಲಾಗಿದೆ.

ವ್ಯಾಪಕ ಕಾಪಿ ನಡೆದ ಕಾಲೇಜುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪರೀಕ್ಷಾ ಕೇಂದ್ರಗಳಾಗಿ ಮಾಡಲಾಗುವುದಿಲ್ಲ.

3815(4059) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) ಮಾನ್ಯ
ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಈ ಕಳೆಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳೆಷ್ಟು;

ಆ) ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ನಗರ ಪ್ರದೇಶಗಳ ಖಾಸಗಿ ಶಾಲೆಗಳಲ್ಲಿ ಎಲ್.ಕೆ.ಜಿ. ಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಗ್ರಾಮ–ನಗರ ಹಾಗೂ ಮೇಲುವರ್ಗ– ಕೆಳವರ್ಗಗಳ ನಡುವಿನ ತಾರತಮ್ಯ ನಿವಾರಿಸಲು ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದು ಸೂಕ್ತವೆಂದು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ 43591